**ಕರ್ನಾಟಕ ಸರ್ಕಾರ**

**ಕಾನೂನು ಮಾಪನಶಾಸ್ತ್ರ ಇಲಾಖೆ**

**ಸಂಖ್ಯೆ:ಕಾಮಾಇ/ಸನಿತಾ/ಸಿಆರ್-** 74/2023-24

**ಕಾನೂನು ಮಾಪನಶಾಸ್ತ್ರ ನಿಯಂತ್ರಕರ ಕಚೇರಿ**
**"ಮಾಪನಸೌಧ", 4ನೇ ಮಹಡಿ, ನಂ.1, ಆಲಿ ಆಸ್ಕರ್ ರಸ್ತೆ,**
**ಪಿ.ಬಿ. 175, ಬೆಂಗಳೂರು**-52, **ದಿನಾಂಕ**:13-11-2023.

## <u>ಸುತ್ತೋಲೆ</u>

**ವಿಷಯ:** ಕರ್ನಾಟಕ ಲೀಗಲ್ ಮೆಟ್ರಾಲಜಿ (ಅಮಲಜಾರಿ) ನಿಯಮಗಳು 2011 ರನ್ವಯ ತಯಾರಕ/ಮಾರಾಟ/ದುರಸ್ತಿ ಅನುಜ್ಞಾಪತ್ರಗಳನ್ನು 2024ನೇ ಸಾಲಿಗೆ ನವೀಕರಿಸಿಕೊಳ್ಳಲು ಆನ್‌ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ:** Karnataka Gazette order No.CLM/ACT/CR-66/2020-21 Bengaluru. Dated: 23-09-2020.

2 ಸರ್ಕಾರದ ಅಧಿಸೂಚನೆ ಸಂಖ್ಯೆ: FCS 15 EBT 2020(E-Office), Dt:03-12-2022

3 ಈ ಕಛೇರಿಯ ಆದೇಶ ಸಂಖ್ಯೆ:ಕಾಮಾಇ/ಸನಿತಾ/ಜಿ.ಎಸ್.ಟಿ/ಸಿಆರ್-22/2023-24, ದಿನಾಂಕ:17-07-2023.

******

2023ರ ಕ್ಯಾಲೆಂಡರ್ ವರ್ಷದಲ್ಲಿ ಹೊಸದಾಗಿ ನೀಡಿರುವ ಅನುಜ್ಞಾಪತ್ರಗಳನ್ನು ಹೊರತುಪಡಿಸಿ 2023ರ ಕ್ಯಾಲೆಂಡರ್ ವರ್ಷಕ್ಕೆ ನವೀಕರಿಸಲ್ಪಟ್ಟಿರುವ ತಯಾರಕರ, ಮಾರಾಟಗಾರರ ಮತ್ತು ದುರಸ್ತಿದಾರರ ಅನುಜ್ಞಾಪತ್ರಗಳ ಸಿಂಧುತ್ವದ ಅವಧಿಯು 31-12-2023ಕ್ಕೆ ಅಂತ್ಯಗೊಳ್ಳಲಿದ್ದು, 2023ರ ಕ್ಯಾಲೆಂಡರ್ ವರ್ಷಕ್ಕೆ ನವೀಕರಿಸಲ್ಪಟ್ಟಿರುವ ಹಾಗೂ ಪ್ರಸಕ್ತ ವರ್ಷದಲ್ಲಿ ತಿದ್ದುಪಡಿ ಮಾಡಿಕೊಂಡಿರುವ **(2023 ಕ್ಕಿಂತ ಹಿಂದೆ ಪಡೆದಿಕೊಂಡಿರುವ ಎಲ್ಲಾ ಅನುಜ್ಞಾಪತ್ರಗಳು)** ಎಲ್ಲಾ ಅನುಜ್ಞಾಪತ್ರಗಳನ್ನು 2024ನೇ ಸಾಲಿಗೆ (ಎರಡು ವರ್ಷಗಳ ಕ್ಯಾಲೆಂಡರ್ ಅವಧಿಗೆ) ನವೀಕರಣಗೊಳಿಸಿಕೊಳ್ಳಬೇಕಾಗಿದ್ದು, ನವೀಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ನೂತನ ವ್ಯವಸ್ಥೆಯ(ಸ್ವಯಂ ಚಾಲಿತ ನವೀಕರಣ) ಬಗ್ಗೆ ಉಲ್ಲೇಖಿತ-(1)ರ ಅಧಿಸೂಚನೆಯಲ್ಲಿ ತಿಳಿಸಲಾಗಿರುತ್ತದೆ. ಅದರಂತೆ ಅನುಜ್ಞಾರ್ಥಿಗಳು ಉಲ್ಲೇಖಿತ-(2)ರಲ್ಲಿ ಪರವಾನಗಿ ನವೀಕರಣ ಶುಲ್ಕ ನಿಗಧಿಪಡಿಸಿರುವಂತೆ ಆನ್-ಲೈನ್ ನಲ್ಲಿ ಅರ್ಜಿ ಸಲ್ಲಿಸಿ ಇ-ಪೇಮೆಂಟ್ ಗೇಟ್ ವೇ ಮೂಲಕ ನವೀಕರಣ ಶುಲ್ಕವನ್ನು ಪಾವತಿಸಿ 2024ರ ಸಾಲಿಗೆ ಪರವಾನಗಿಗಳನ್ನು ಸ್ವಯಂ ಚಾಲಿತ ನವೀಕರಣ ಮಾಡಿಕೊಳ್ಳಬೇಕಾಗಿರುತ್ತದೆ.

ಈ ರೀತಿ ಆನ್-ಲೈನ್ ಮೂಲಕ ಅನುಜ್ಞಾರ್ಥಿಗಳು ಸ್ವಯಂ ಚಾಲಿತ ನವೀಕರಣ ಮಾಡಿಕೊಳ್ಳುವ ಮುಂಚಿತವಾಗಿ ಆಯಾಯ ಕ್ಷೇತ್ರವ್ಯಾಪ್ತಿಯ ಸಹಾಯಕ ನಿಯಂತ್ರಕರುಗಳು ಅವರವರ ಕ್ಷೇತ್ರವ್ಯಾಪ್ತಿಗೆ ಒಳಪಡುವಂತಹ ತಯಾರಿಕಾ/ ಮಾರಾಟ/ ದುರಸ್ಥಿ ಅನುಜ್ಞಾಪತ್ರಗಳ ಬಗ್ಗೆ ಹೊಸದಾಗಿ ಈ ಕೆಳಕಂಡ ಅಂಶಗಳ ಸೂಚನೆಗಳನ್ವಯ ಆಯಾಯ ಜಿಲ್ಲಾ / ವೃತ್ತ ವ್ಯಾಪ್ತಿಯ ಸಹಾಯಕ ನಿಯಂತ್ರಕರುಗಳು ಸ್ವಯಂ ಚಾಲಿತ ನವೀಕರಣಕ್ಕೆ ಮುಂಚಿತವಾಗಿ **(ನವೆಂಬರ್-2023ರ ಅಂತ್ಯದೊಳಗೆ)** ಅನುಜ್ಞಾರ್ಥಿಗಳ ಮೂಲ ದಾಖಲೆಗಳನ್ನು ಪರಿಶೀಲಿಸಿ ನವೀಕರಣಕ್ಕೆ ಅನುಮತಿ ನೀಡಬೇಕಾಗಿರುತ್ತದೆ.

ಕಳೆದ 2022ರ ಅವಧಿಯಲ್ಲಿ ಕೆಲವು ಅನರ್ಹ ಅನುಜ್ಞಾಪತ್ರಗಳು ಸಹ ಸ್ವಯಂ ಚಾಲಿತವಾಗಿ ನವೀಕರಣಗೊಂಡಿರುತ್ತವೆ. ಈ ನಿಟ್ಟಿನಲ್ಲಿ ಇದನ್ನು ಗಮನದಲ್ಲಿಟ್ಟುಕೊಂಡು ಕ್ಷೇತ್ರವ್ಯಾಪ್ತಿಯ ಸಹಾಯಕ ನಿಯಂತ್ರಕರುಗಳು ತಮ್ಮ ವ್ಯಾಪ್ತಿಯ ಅನುಜ್ಞಾಪತ್ರಗಳ ನವೀಕರಣಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಪರಿಶೀಲಿಸಿ, ಅನುಜ್ಞಾರ್ಥಿಗಳು ಇ-ಮಾಪನ್ ತಂತ್ರಾಂಶದಲ್ಲಿ ಸ್ವಯಂ ಜಾಲಿತ ನವೀಕರಣ ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಡುವಂತೆ ಆದೇಶಿಸಿದೆ. ಹಾಗೂ ತಮ್ಮ ಕ್ಷೇತ್ರವ್ಯಾಪ್ತಿಯಲ್ಲಿ ಅನರ್ಹ ಅನುಜ್ಞಾಪತ್ರಗಳು ಸ್ವಯಂ ಚಾಲಿತ ನವೀಕರಣಗೊಂಡ ಪಕ್ಷದಲ್ಲಿ ಆಯಾಯ ಕ್ಷೇತ್ರವ್ಯಾಪ್ತಿಯ ಸಹಾಯಕ ನಿಯಂತ್ರಕರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

2023ರ ಕ್ಯಾಲೆಂಡರ್ ವರ್ಷದಲ್ಲಿ ಹೊಸದಾಗಿ ನೀಡಿರುವ ಅನುಜ್ಞಾಪತ್ರಗಳನ್ನು ಹೊರತುಪಡಿಸಿ 2023ರ ಕ್ಯಾಲೆಂಡರ್ ವರ್ಷಕ್ಕೆ ನವೀಕರಿಸಲ್ಪಟ್ಟಿರುವ ತಯಾರಕರ, ಮಾರಾಟಗಾರರ ಮತ್ತು ದುರಸ್ತಿದಾರರ ಅನುಜ್ಞಾಪತ್ರಗಳಿಗೆ ಸಂಬಂಧಿಸಿದಂತೆ 2024ರ ಅವಧಿಯ ನವೀಕರಣ ಕುರಿತಂತೆ, ಕ್ಷೇತ್ರಾಧಿಕಾರಿಗಳು / ಅನುಜ್ಞಾರ್ಥಿಗಳು ಈ ಕೆಳಕಂಡ ಸೂಚನೆಗಳನ್ನು ಪಾಲಿಸುವುದು.

1. ಸಹಾಯಕ ನಿಯಂತ್ರಕರು ನವೆಂಬರ್-2023ರ ಮಾಹೆಯ ಅಂತ್ಯದೊಳಗೆ ತಮ್ಮ ಕ್ಷೇತ್ರವ್ಯಾಪ್ತಿಯ ಅನುಜ್ಞಾಪತ್ರಗಳಿಗೆ ಸಂಬಂಧಿಸಿದಂತೆ ತಯಾರಕರು/ಮಾರಾಟಗಾರರು/ದುರಸ್ಥಿದಾರರ ಎಲ್ಲಾ ಮೂಲ ದಾಖಲೆಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ( **ಅನುಜ್ಞಾಪತ್ರ, ಲೆಕ್ಕದ ವಿವರ, ಅನೆಕ್ಷರ್ ಗಳು ಹಾಗೂ ಉಲ್ಲೇಖಿತ-(3)ರ ಆದೇಶದಂತೆ ವಾರ್ಷಿಕ ವಹಿವಾಟು** 20.00**ಲಕ್ಷ ಮೀರಿರುವ/ ಮೀರದಿರುವ ಬಗ್ಗೆ ಪರಿಶೀಲಿಸುವುದು)** ಪ್ರತ್ಯೇಕ ಕಡತದಲ್ಲಿ ದಾಖಲಿಸಿಕೊಳ್ಳುವುದು.

2. ದಿ:01-01-2023ರಿಂದ ಇಲ್ಲಿಯವರೆವಿಗೆ ತಿದ್ದುಪಡಿ ಮಾಡಿಕೊಂಡಿರುವ ಹಳೆಯ ಅನುಜ್ಞಾಪತ್ರಗಳಲ್ಲಿ ಇ-ಮಾಪನ್ ತಂತ್ರಾಂಶದ ತಾಂತ್ರಿಕ ದೋಷದಿಂದಾಗಿ ಪರವಾನಗಿ ಅವಧಿಯು ಎರಡು ವರ್ಷಗಳಿಗೆ **(ದಿ:1-01-2023ರಿಂದ 31-12-2024)** ನಮೂದಾಗಿರುತ್ತದೆ. ಆದುದರಿಂದ ಸದರಿ ಅನುಜ್ಞಾಪತ್ರಗಳನ್ನು ಸಹ ಪರವಾನಗಿದಾರರು ಕಡ್ಡಾಯವಾಗಿ 2024ರ ಸಾಲಿಗೆ ನವೀಕರಿಸಿಕೊಳ್ಳುವುದು.

3. ಸಹಾಯಕ ನಿಯಂತ್ರಕರು ಎಲ್ಲಾ ಅನುಜ್ಞಾರ್ಥಿಗಳ ಮಾಹಿತಿಯನ್ನು ರಿಜಿಸ್ಟರ್ ವಹಿಯಲ್ಲಿ (ತಯಾರಕಾ/ಮಾರಾಟ/ದುರಸ್ಥಿದಾರರವಾರು ಮತ್ತು ಲೈಸೆನ್ಸ್ ಸಂಖ್ಯೆಗಳೊಂದಿಗೆ) ದಾಖಲಿಸಿಕೊಂಡು ತಮ್ಮ ವ್ಯಾಪ್ತಿಯಲ್ಲಿ ಎಷ್ಟು ತಯಾರಿಕಾ/ಮಾರಾಟ/ದುರಸ್ಥಿ ಲೈಸೆನ್ಸ್‌ಗಳ ನವೀಕರಣಕ್ಕೆ ಅನುಮತಿ ನೀಡಲಾಗಿರುತ್ತದೆ ಎಂಬ ಮಾಹಿತಿಯನ್ನು ಕೇಂದ್ರ ಕಛೇರಿಗೆ ತಪ್ಪದೇ ಸಲ್ಲಿಸುವುದು. **(ತಡವಾಗಿ ಕೇಂದ್ರ ಕಛೇರಿಯಿಂದ ಅನುಮತಿ ಪಡೆದು ನವೀಕರಿಸಲ್ಪಟ್ಟವುಗಳನ್ನೊಳಗೊಂಡಂತೆ)** ಹಾಗೂ ಸಹಾಯಕ ನಿಯಂತ್ರಕರು ಅನುಮತಿ ನೀಡಿರುವ ಲೈಸೆನ್ಸ್‌ಗಳಿಗೂ ಹಾಗೂ ನವೀಕರಣಗೊಂಡಿರುವ ಲೈಸೆನ್ಸ್‌ಗಳಿಗೂ ಹೊಂದಾಣಿಕೆ ಆಗತಕ್ಕದು. ಒಂದು ವೇಳೆ ಅನುಮತಿ ನೀಡದ ತಮ್ಮ ಕೇತ್ರವ್ಯಾಪ್ತಿಯ ಅನುಜ್ಞಾಪತ್ರಗಳು ನವೀಕರಣಗೊಂಡಲ್ಲಿ ಸಹಾಯಕ ನಿಯಂತ್ರಕರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.

4. ದಿನಾಂಕ: 10-12-2020ರ ಸರ್ಕಾರದ ಅಧಿಸೂಚನೆಯ ಕ್ರಮ ಸಂಖ್ಯೆ-(7)ರಲ್ಲಿ ತಿಳಿಸಿರುವಂತೆ ಹಾಲಿ ದುರಸ್ಥಿ ಲೈಸೆನ್ಸ್ ಹೊಂದಿರುವವರ ವಯೋಮಿತಿ 60 ವರ್ಷಗಳು ಮೀರಿದ್ದಲ್ಲಿ ಸದರಿಯವರುಗಳ ಲೈಸೆನ್ಸ್ ನವೀಕರಣಕ್ಕೆ ಸಂಬಂಧಿಸಿದ ದಾಖಲೆಗಳ ಪರಿಶೀಲನಾ ಸಮಯದಲ್ಲಿ ಸರ್ಕಾರಿ ವೈದ್ಯಾಧಿಕಾರಿಗಳಿಂದ ಆರೋಗ್ಯದ ಬಗ್ಗೆ ಫಿಟನೆಸ್ ಸರ್ಟಿಫೀಕೇಟ್ ಪಡೆದು ಕಡ್ಡಾಯವಾಗಿ ಹಾಜರುಪಡಿಸಿದ್ದಲ್ಲಿ ಪರಿಶೀಲಿಸಿ ದುರಸ್ಥಿ ಕಾರ್ಯ ನಿರ್ವಹಿಸಲು ಅರ್ಹರಿರುವವರಿಗೆ ಮಾತ್ರ ನವೀಕರಣಕ್ಕೆ ಅವಕಾಶ ನೀಡುವುದು.

5. ನಕಲಿ ಅಂಕಪಟ್ಟಿಗಳನ್ನು ಸಲ್ಲಿಸಿ ಕೆಲವರು ದುರಸ್ಥಿ ಪರವಾನಗಿಗಳನ್ನು ಪಡೆದುಕೊಂಡಿರುತ್ತಾರೆಂದು ದೂರು ಬಂದಿದ್ದ ಹಿನ್ನೆಲೆಯಲ್ಲಿ ಈ ಕಛೇರಿಯ ಜ್ಞಾಪನ ಪತ್ರ ಸಂಖ್ಯೆ: ಕಾಮಾಇ/ಸನಿತಾ/ಸಿಆರ್-144/2021-22, ದಿನಾಂಕ:18-03-2022ರಲ್ಲಿ 10-09-2018ರಿಂದ ಈಚೆಗೆ ನೀಡಿರುವ ತಮ್ಮ ವ್ಯಾಪ್ತಿಯಲ್ಲಿ ಬರುವ ಅನುಜ್ಞಾಪತ್ರಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟಂತಹ ವಿದ್ಯಾರ್ಹತೆ ದಾಖಲಾತಿಗಳನ್ನು ಶಿಕ್ಷಣ ಇಲಾಖೆಯ ನಿಗಮ, ವಿದ್ಯಾಸಂಸ್ಥೆ ಅಥವಾ ವಿಶ್ವವಿದ್ಯಾಲಯಗಳಿಗೆ ಪತ್ರ ಬರೆದು ದಾಖಲೆಗಳ ನೈಜತೆಯನ್ನು ಪರಿಶೀಲಿಸಿ ಸಮಗ್ರ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿತ್ತು. ಆದರೆ ಕೆಲವು ಕಛೇರಿಗಳಿಂದ ಇದುವರೆವಿಗೂ ಯಾವುದೇ ವರದಿ ಸಲ್ಲಿಕೆಯಾಗಿರುವುದಿಲ್ಲ. ಆದ್ದರಿಂದ ವಿದ್ಯಾರ್ಹತೆ ಇಲ್ಲದೆ ನಕಲಿ ಅಂಕಪಟ್ಟಿ/ದಾಖಲಾತಿ ಸಲ್ಲಿಸಿ ದುರಸ್ಥಿ ಪರವಾನಗಿ ಪಡೆದಿರುವ ಅನರ್ಹ ಅನುಜ್ಞಾಪತ್ರಗಳು ನವೀಕರಣ ಆಗುವುದನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ದಿ:10-09-2018ರಿಂದ ಈಚೆಗೆ ಅನುಮೋದನೆಗೊಂಡಿರುವ ಜಿಲ್ಲಾವ್ಯಾಪ್ತಿ/ಕಛೇರಿವಾರು ದುರಸ್ಥಿ ಪರವಾನಗಿಗಳ ಪಟ್ಟಿಯನ್ನು ಸಹಾಯಕ ನಿಯಂತ್ರಕರುಗಳಿಗೆ ಕಳುಹಿಸಿಕೊಡುತ್ತಾ, ದಿ:10-09-2018ರಿಂದ ಈಚೆಗೆ ನೀಡಿರುವ ದುರಸ್ಥಿ ಅನುಜ್ಞಾಪತ್ರಗಳಿಗೆ ಸಂಬಂಧಿಸಿದಂತೆ ಅನುಜ್ಞಾಪತ್ರ ಪಡೆಯಲು ಅನುಜ್ಞಾರ್ಥಿಗಳು ಸಲ್ಲಿಸಿರುವ ಅಂಕಪಟ್ಟಿಗಳಿಗೆ ಸಂಬಂಧಿಸಿದಂತೆ ಅನುಜ್ಞಾರ್ಥಿಗಳೇ/ಪರವಾನಗಿದಾರರೇ ಅವರ ಅಂಕಪಟ್ಟಿಯ ನೈಜತೆ ಕುರಿತಂತೆ ಸಂಬಂಧಪಟ್ಟ ಶಿಕ್ಷಣ ಇಲಾಖೆಯ ನಿಗಮ, ವಿಶ್ವವಿದ್ಯಾಲಯಗಳಿಂದ ನೈಜತೆ ಪ್ರಮಾಣ ಪತ್ರವನ್ನು ಪಡೆದು ಒದಗಿಸಿದ್ದಲ್ಲಿ ಮಾತ್ರ ಸಹಾಯಕ ನಿಯಂತ್ರಕರು ಪರಿಶೀಲಿಸಿ ಖಚಿತಪಡಿಸಿಕೊಂಡು ನಂತರ ನವೀಕರಣಕ್ಕೆ ಅನುಮತಿ ನೀಡುವ ಬಗ್ಗೆ ಕ್ರಮ ವಹಿಸುವುದು.

6. ಅಂಕಪಟ್ಟಿಗಳ ನೈಜತೆಗೆ ಸಂಬಂಧಿಸಿದಂತೆ ಅನುಜ್ಞಾರ್ಥಿಗಳೇ/ಪರವಾನಗಿದಾರರೇ ನೈಜತೆಗೆ ತಗಲುವ ಶುಲ್ಕ ಭರಿಸಿಬೇಕಾಗಿರುತ್ತದೆ.

7. ಪರವಾನಗಿದಾರರು(ತಯಾರಿಕ/ಮಾರಾಟ/ದುರಸ್ಥಿದಾರರು) ನವೀಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಮೂಲ ದಾಖಲೆಗಳನ್ನು ಸಂಬಂಧಪಟ್ಟ ಕ್ಷೇತ್ರವ್ಯಾಪ್ತಿಯ ಸಹಾಯಕ ನಿಯಂತ್ರಕರಿಗೆ ಪರಿಶೀಲನೆಗೆ ಒಳಪಡಿಸುವುದು ಹಾಗೂ ಸಹಾಯಕ ನಿಯಂತ್ರಕರು ನವೀಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲಿಸಿ ನಂತರ NOC ಯನ್ನು ನೀಡುವುದು. NOC ಯನ್ನು ನೀಡಿದ ಪರವಾನಗಿದಾರರಿಗೆ ಮಾತ್ರ ಲೈಸೆನ್ಸ್ ಅನ್ನು ನವೀಕರಿಸಿಕೊಳ್ಳಲು ಸಹಾಯಕ ನಿಯಂತ್ರಕರು ತಮ್ಮ

ಲಾಗಿನ್ ನಲ್ಲಿ Unblock ಮಾಡಿ ಅವಕಾಶ ಕಲ್ಪಿಸುವುದು. ಹಾಗೂ ಸದರಿ NOC ಪ್ರತಿಯನ್ನು ಇ-ಮಾಪನ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ಸಹಾಯಕ ನಿಯಂತ್ರಕರುಗಳೇ ಅಪ್ಲೋಡ್ ಮಾಡುವುದು.

8. ದುರಸ್ಥಿದಾರರುಗಳಿಗೆ ಸಂಬಂಧಿಸಿದಂತೆ ಪ್ರಸಕ್ತ ಸಾಲಿಗೆ ಅವರ ವಾರ್ಷಿಕ ವಹಿವಾಟು Central Goods and Services Act 2017 ರ ಸೆಕ್ಷನ್ 2(6)ರನ್ವಯ ನಿಗಧಿಪಡಿಸಿರುವ ಮೊತ್ತವನ್ನು ದಾಟಿರುವ /ದಾಟಿಲ್ಲದಿರುವ ಬಗ್ಗೆ ದೃಢೀಕರಣವನ್ನು ಸಂಬಂಧಪಟ್ಟ ಅನುಜ್ಞಾರ್ಥಿಗಳಿಗೆ ನೀಡಿ, ದೃಢೀಕೃತ ಪ್ರತಿಯನ್ನು ಇ-ಮಾಪನ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ಸಹಾಯಕ ನಿಯಂತ್ರಕರುಗಳೇ ಅಪ್ಲೋಡ್ ಮಾಡುವುದು.

9. ಒಂದು ವೇಳೆ ದುರಸ್ಥಿದಾರರ ವಾರ್ಷಿಕ ವಹಿವಾಟು Central Goods and Services Act 2017ರ ಪ್ರಕಾರ ನಿಗಧಿಪಡಿಸಿರುವ ಮೊತ್ತವನ್ನು ದಾಟಿದಲ್ಲಿ ಜಿ.ಎಸ್.ಟಿ ಮತ್ತು ವಾಣಿಜ್ಯ ತೆರಿಗೆ ಇಲಾಖೆಗೆ Returns File ಮಾಡಿರುವ ಕುರಿತಂತೆ ಸಹಾಯಕ ನಿಯಂತ್ರಕರು ದಾಖಲೆಗಳನ್ನು ಮತ್ತು ಅವುಗಳ ಪ್ರತಿಯನ್ನು ಕಡ್ಡಾಯವಾಗಿ ಪರವಾನಗಿದಾರರಿಂದ ಪಡೆದು ಪರಿಶೀಲಿಸಿ ನಂತರ ನಿಗಧಿತ ಅವಧಿಯೊಳಗೆ ನವೀಕರಣ ಮಾಡಿಕೊಳ್ಳಲು ಅವಕಾಶ ಮಾಡಿಕೊಡುವುದು.

10. ಸಂಬಂಧಿಸಿದ ಕ್ಷೇತ್ರವ್ಯಾಪ್ತಿಯ ಸಹಾಯಕ ನಿಯಂತ್ರಕರು ಅವರ ವ್ಯಾಪ್ತಿಯಲ್ಲಿ ಬರುವ ಯಾವುದಾದರೂ ತಯಾರಿಕಾ/ಮಾರಾಟ/ದುರಸ್ತಿ ಅನುಜ್ಞಾಪತ್ರ ಅಮಾನತ್ತುಗೊಂಡಿದ್ದಲ್ಲಿ ಅಂತಹ ಪ್ರಕರಣಗಳ ಅನುಜ್ಞಾಪತ್ರ ನವೀಕರಣಕ್ಕೆ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸಿ, ಅನುಮತಿ ನೀಡಿದ್ದಲ್ಲಿ ಮಾತ್ರ ಪ್ರಸಕ್ತ ಸಾಲಿಗೆ ನವೀಕರಣಕ್ಕೆ ಅವಕಾಶ ನೀಡುವುದು.

**11.** ಎಲ್ಲಾ ತಯಾರಿಕಾ/ಮಾರಾಟ/ ದುರಸ್ತಿ ಅನುಜ್ಞಾರ್ಥಿಗಳು ಅವರ ಅನುಜ್ಞಾಪತ್ರಗಳ ಸ್ವಯಂ ಚಾಲಿತ ನವೀಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಸಂಬಂಧಿಸಿದ ಕ್ಷೇತ್ರವ್ಯಾಪ್ತಿಯ ಸಹಾಯಕ ನಿಯಂತ್ರಕರಿಗೆ ನವೆಂಬರ್ ಅಂತ್ಯದೊಳಗೆ ಪರಿಶೀಲನೆಗೆ ಒಳಪಡಿಸತಕ್ಕದ್ದು, ಹಾಗೂ ಈ ಪ್ರಕ್ರಿಯೆಯನ್ನು ನವೆಂಬರ್ ಅಂತ್ಯಕ್ಕೆ ಪೂರ್ಣಗೊಳಿಸುವಂತೆ ಎಲ್ಲಾ ಸಹಾಯಕ ನಿಯಂತ್ರಕರಿಗೆ ಸೂಚಿಸಿದೆ.

**12.** ರಾಜ್ಯದ ಎಲ್ಲಾ ಅನುಜ್ಞಾರ್ಥಿಗಳಿಗೆ ಅನುಜ್ಞಾಪತ್ರಗಳ ನವೀಕರಣಕ್ಕೆ ಡಿಸೆಂಬರ್ 01 ರಿಂದ ಡಿಸೆಂಬರ್ 31 ರವರೆಗೆ (01-12-2023 ರಿಂದ 31-12-2023ರವರೆಗೆ ) ಇ-ಮಾಪನ್ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಿದ್ದು ಸದರಿ ಅವಧಿಯೊಳಗೆ ನಿಗಧಿತ ನವೀಕರಣ ಶುಲ್ಕ ಭರಿಸಿ ನವೀಕರಣ ಮಾಡಿಕೊಳ್ಳುವುದು.

13. ಅನುಜ್ಞಾರ್ಥಿಗಳು ಡಿಸೆಂಬರ್ ಮಾಹೆಯೊಳಗೆ (ದಿ:31-12-2023ರ ರೊಳಗೆ) ಅನುಜ್ಞಾಪತ್ರವನ್ನು ನವೀಕರಣ ಮಾಡಿಕೊಳ್ಳದಿದ್ದಲ್ಲಿ ದಿನಾಂಕ:01-01-2024 ರಿಂದ 31-01-2024 ರೊಳಗೆ ಅನುಜ್ಞಾಪತ್ರವನ್ನು 2024 ಮತ್ತು 2025ರ ಅವಧಿಗೆ ನವೀಕರಿಸಿಕೊಳ್ಳಲು ಇಚ್ಚೆಸಿದ್ದಲ್ಲಿ, ನೇರವಾಗಿ ಕಾನೂನು ಮಾಪನಶಾಸ್ತ್ರ ನಿಯಂತ್ರಕರಿಗೆ ವಿಳಂಬಕ್ಕೆ ಸಕಾರಣಗಳೊಂದಿಗೆ ಮನವಿ ಸಲ್ಲಿಸಿ, ಲಿಖಿತ ಅನುಮತಿ ಪಡೆದು ನಂತರ, ಸಹಾಯಕ ನಿಯಂತ್ರಕರಿಂದ Unblock ಮಾಡಿಸಿಕೊಂಡು ಹೆಚ್ಚುವರಿ ಶುಲ್ಕದೊಂದಿಗೆ ಅರ್ಜಿಯನ್ನು

ನವೀಕರಿಸಿಕೊಳ್ಳುವುದು. ದಿನಾಂಕ:31-01-2024ರ ನಂತರ ನವೀಕರಣಕ್ಕೆ ಅನುಮತಿ ಕೋರಿ ಮನವಿ ಸಲ್ಲಿಸಿದ್ದಲ್ಲಿ ಅಂತಹ ಯಾವುದೇ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

14. ಇ-ಮಾಪನ್ ತಂತ್ರಾಂಶದಲ್ಲಿನ ನವೀಕರಣಕ್ಕೆ ಸಂಬಂಧಿಸಿದಂತೆ Flow Chart ಲಗತ್ತಿಸಿದ್ದು ಅದರಂತೆ ಸಹಾಯಕ ನಿಯಂತ್ರಕರು ಕ್ರಮ ವಹಿಸುವುದು.

15. ನವೀಕರಣಗೊಂಡ ಮೂಲ ಅನುಜ್ಞಾಪತ್ರಗಳು ಸಂಬಂಧಪಟ್ಟ ಅನುಜ್ಞಾರ್ಥಿಗಳ ಲಾಗಿನ್‌ನಲ್ಲಿ ಲಭ್ಯವಿರುತ್ತದೆ ಸದರಿಯವರು ಅನುಜ್ಞಾಪತ್ರಗಳನ್ನು ಡೌನ್ ಲೋಡ್ ಮಾಡಿಕೊಳ್ಳುವುದು.

16. ಪರವಾನಗಿದಾರರುಗಳಿಗೆ ಯಾವ ತೂಕ ಮತ್ತು ಅಳತೆ ಸಾಧನಗಳನ್ನು ತಯಾರಿಕಾ/ಮಾರಾಟ/ದುರಸ್ತಿ ಮಾಡಲು ಮೂಲ ಪರವಾನಗಿಯಲ್ಲಿ ನಮೂದಿಸಲಾಗಿದೆಯೋ ಅದೇ ತೂಕ ಮತ್ತು ಅಳತೆ ಸಾಧನಗಳ ನಮೂದುಗಳು ನವೀಕರಣ ನಂತರವು ಮೂಲ ಅನುಜ್ಞಾಪತ್ರದಲ್ಲಿ ಇರತಕ್ಕದ್ದು. **(ಉದಾ: ಮೂಲ ಅನುಜ್ಞಾಪತ್ರಗಳಲ್ಲಿ ಎಲ್ಲಾ ರೀತಿಯ ಎಲೆಕ್ಟ್ರಾನಿಕ್ ತೂಕ ಅಳತೆ ಸಾಧನಗಳು ಎಂದಿದ್ದಲ್ಲಿ ಎಲೆಕ್ಟ್ರಾನಿಕ್ ತೂಕ ಮತ್ತು ಅಳತೆ ಸಾಧನಗಳು ಮತ್ತು ಎಲ್ಲಾ ರೀತಿಯ ಮೆಕ್ಯಾನಿಕಲ್ ತೂಕ ಮತ್ತು ಅಳತೆ ಸಾಧನಗಳು ಎಂದಿದ್ದಲ್ಲಿ ಮೆಕ್ಯಾನಿಕಲ್ ತೂಕ ಮತ್ತು ಅಳತೆ ಸಾಧನಗಳು ಎಂದು ಇರತಕ್ಕದ್ದು)** ಒಂದು ವೇಳೆ ತಾಂತ್ರಿಕ ದೋಷದಿಂದಾಗಿ ನಮೂದುಗಳು ತಪ್ಪಾಗಿದ್ದಲ್ಲಿ ಕೂಡಲೇ ಸಂಬಂಧಪಟ್ಟ ಲೈಸೆನ್ಸ್ ದಾರರು ಕೇಂದ್ರ ಕಛೇರಿಯ ಗಮನಕ್ಕೆ ತಂದು ಬದಲಾವಣೆ ಮಾಡಿಕೊಳ್ಳುವುದು. ತಪ್ಪಿದ್ದಲ್ಲಿ ಸಂಬಂಧಪಟ್ಟ ಸಹಾಯಕ ನಿಯಂತ್ರಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

**ವಿ.ಸೂ: ತಂತ್ರಾಂಶಕ್ಕೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆಗಳಿದ್ದಲ್ಲಿ ಇ-ಮಾಪನ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ: 080-2237373500, 080-22383500 ಹಾಗೂ** www.emapan.karnataka.gov.in **ಇ-ಮೇಲ್** **emapan.kar.lmdhelpdesk@gmail.com** **ನ್ನು ಸಂಪರ್ಕಿಸಿ ಸಹಾಯ ಪಡೆಯುವುದು.**

ನಿಯಂತ್ರಕರು

ಕಾನೂನು ಮಾಪನಶಾಸ್ತ್ರ ಇಲಾಖೆ

12/11

ಗೆ,

1. ರಾಜ್ಯದ ಎಲ್ಲಾ ಕಾನೂನು ಮಾಪನಶಾಸ್ತ್ರ ಸಹಾಯಕ ನಿಯಂತ್ರಕರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಅನುಜ್ಞಾರ್ಥಿಗಳಿಗೆ (ಕ್ಷೇತ್ರವ್ಯಾಪ್ತಿಯ ಸಹಾಯಕ ನಿಯಂತ್ರಕರ ಮುಖಾಂತರ)

ಪ್ರತಿಯನ್ನು:

1. ರಾಜ್ಯದ ಎಲ್ಲಾ ಕಾನೂನು ಮಾಪನಶಾಸ್ತ್ರ ಉಪ ನಿಯಂತ್ರಕರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ರಾಜ್ಯದ ಎಲ್ಲಾ ಕಾನೂನು ಮಾಪನಶಾಸ್ತ್ರ ನಿರೀಕ್ಷಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಕೇಂದ್ರ ಕಛೇರಿ ಅಧೀಕ್ಷಕರು (ಆಡಳಿತ), ಅಧೀಕ್ಷಕರು (ತಾಂತ್ರಿಕ) ಮತ್ತು ನಿಯಂತ್ರಕರ ಆಪ್ತ ಶಾಖೆಗೆ.
4. ರಕ್ಷಾತಾ ಕಡತಕ್ಕೆ.

5. ಇ-ಮಾಪನ್ ಹೆಲ್ಪ್ ಡೆಸ್ಕ್ ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡುತ್ತಾ, ಸದರಿ ಸುತ್ತೋಲೆಯನ್ನು ಇ-ಮಾಪನ್ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಿದೆ. ಹಾಗೂ ಮೇಲಿನ ಅಂಶಗಳನ್ನು ಇ- ಮಾಪನ್ ತಂತ್ರಾಂಶದಲ್ಲಿ ಕೂಡಲೇ ಅಳವಡಿಸಲು ಸೂಚಿಸಿದೆ.

**ತಯಾರಿಕಾ/ಮಾರಾಟ/ದುರಸ್ಥಿ ಅನುಜ್ಞಾಪತ್ರಗಳನ್ನು 2024ನೇ ಸಾಲಿಗೆ (ಎರಡು ವರ್ಷಗಳ ಕ್ಯಾಲೆಂಡರ್ ಅವಧಿಗೆ) ನವೀಕರಿಸುವ ಕುರಿತಂತೆ ಸಹಾಯಕ ನಿಯಂತ್ರಕರುಗಳು ಇ-ಮಾಪನ್ ತಂತ್ರಾಂಶದಲ್ಲಿ ಅಳವಡಿಸಿಕೊಳ್ಳಬೇಕಾದ ಕಾರ್ಯವಿಧಾನ.**

## Flow Chart.

Login

↓

Licence

↓

Licence Renewal Details

↓

Application Type / Application Category

↓

Manufacturer / Dealer / Repairer

↓

Search

↓

Licence No- Click

↓

Remarks to be furnished by Jurisdiction ACLM

↓

Upload NOC/GST Exemption related Document and click Unblock